ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳ ಹಂಚಿಕೆ

*೬೦೩. ಶ್ರೀ ಎ. ಎಂ. ಹಿಂಡಸಗೇರಿ,—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರವು ೧೯೮೬-೮೭, ೧೯೮೭-೮೮ರಲ್ಲಿ ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ, ಈ ಹಂಚಿಕೆಗಳನ್ನು ಯಾವ ಆಧಾರದ ಮೇಲೆ ಮಾಡಲಾಗಿದೆ, ಇದಕ್ಕಾಗಿ ಸಮಿತಿಯಂನ್ನು ರಚಿಸಲಾಗಿದೆಯೇ ?

ಆ) ನಿವೇಶನ ಹಂಚಿಕೆಯಲ್ಲಿ ಯಾವ ಯಾವ ನಿಯಮಪನ್ನು ಅನುಸರಿಸಲಾಗುತ್ತಿದೆ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ೧೯೮೬-೮೭ ೨೨೭ ನಿವೇಶನಗಳು

೧೯೮೭-೮೮ ಯಾವುದೂ ಇಲ್ಲ

ನಿವೇಶನ ವಿತರಣೆಗಾಗಿ ಹಿಂದಿನ ನಗರಾಭಿವೃದ್ಧಿ ಮಂಡಲಿಯು ಮೆಂಬರುಗಳಲ್ಲಿಯೇ ಒಂದು ಉಪ ಸಮಿತಿ ಮಾಡಿತ್ತು.

ಆ) ಕರ್ನಾಟಕ ಇಂಪ್ರೂವ್‌ಮೆಂಟ್ ಬೋರ್ಡಿನ ೧೯೭೬ರ ನಿಯಮ.

ಶ್ರೀ ಎ. ಎಂ. ಹಿಂಡಸಗೇರಿ.— ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಮಾನ್ಯ ಮಂತ್ರಿಯವರು ೧೯೮೬-೮೭ರಲ್ಲಿ ೨೨೭ ನಿವೇಶನಗಳನ್ನು ಹುಬ್ಬಳ್ಳಿ ಧಾರವಾಡ ಕಾರ್ಪೊರೇಷನ್ ಏರಿಯಾದಲ್ಲಿ ಹಂಚಿಕೆ ಮಾಡಲಾಗಿದೆಯೆಂದು ಹೇಳಿದ್ದಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಎರಡನೆಯ ದೊಡ್ಡ ನಗರ ಇದು. ಇವರು ೧೯೮೭-೮೮ರಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಿಯೇ ಇಲ್ಲ. ಹೀಗಾಗಿ ನಮ್ಮ ಪಟ್ಟಣಗಳಲ್ಲಿ ಕೊಳಚೆ ಪ್ರದೇಶಗಳು ಬೆಳೆಯುತ್ತಾ ಇವೆ. ಇವತ್ತಿನ ದಿವಸ ಬುಲ್ಡೋಜರ್ ಇಂದ ಕೊಳಚೆ ಪ್ರದೇಶಗಳನ್ನು ಕೆಡವುತ್ತಾ ಇದ್ದಾರೆ. ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಮಾಡಿದ್ದಾರೆ. ಇದರಿಂದ ಯಾವ ಕೆಲಸವೂ ಆಗುವುದಿಲ್ಲ. ಇವರು ಬರೀ ಪರ್ಮಿಷನ್ ಕೊಡುವ ಬಗ್ಗೆ ಅಧಿಕಾರ ಹೊಂದಿದ್ದಾರೆ. ಒಂದೇ ಒಂದು ಸೈಟ್ ಅನ್ನು ಬಡವರಿಗೆ ಆಗಲಿ ಅಥವಾ ಹಿಂದುಳಿದ ವರ್ಗದವರಿಗೆ ಆಗಲಿ ಮೂರು ವರ್ಷದಿಂದ ಕೊಡಲಿಲ್ಲ. ಹುಬ್ಬಳ್ಳಿ ಮತ್ತು ಧಾರವಾಡ ಕಡೆಯವರು ಬೆಳೆಯುತ್ತಾ ಇದೆ ಅದನ್ನು ಒತ್ತಾಗಿ ಬೆಳೆಸುವುದರ ಜೊತೆಗೆ ಅದರ ಸುತ್ತಮುತ್ತ ಇರುವ ಪ್ರದೇಶವನ್ನೂ ನೋಡಿ ಬೆಳೆಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.— ಈಗಾಗಲೇ ಹೇಳಿದ ಹಾಗೆ ೮೬-೮೭ನೇ ಇಸವಿಯಲ್ಲಿ ೨೨೭ ಸೈಟ್‌ಗಳನ್ನು ಅಲಾಟ್ ಮಾಡಿದ್ದೇವೆ. ೮೭-೮೮ರಲ್ಲಿ ಮಾಡದಿರುವುದು ನಿಜ. ಹುಬ್ಬಳ್ಳಿಯಲ್ಲಿ ಹೆಚ್ಚಿನ ನಿವೇಶನಗಳಿಗೆ ಬೇಡಿಕೆ ಇದ್ದುದ್ದು ನಿಜ. ೧೬.೫.೮೮ಕ್ಕೆ ಕಮಿಟಿ ಕಾನ್‌ಸ್ಟಿಟ್ಯೂಟ್ ಆಗಿದೆ. ಲ್ಯಾಂಡ್ ಅಕ್ವಿಸಿಷನ್ ಮಾಡಿಕೊಳ್ಳುವ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ. ಲ್ಯಾಂಡ್ ಅಕ್ವಿಸಿಷನ್ ಮಾಡುವ ಬಗ್ಗೆ ಅನೇಕ ಸಮಸ್ಯೆಗಳು ಇರುತ್ತವೆ. ಆದರೂ ಸಹ ಅಥಾರಿಟಿ ವತಿಯಿಂದ ೩೦೨ ಸೈಟ್‌ಗಳನ್ನು ಮಾಡಿ ಅವು ಗಮನಗಟ್ಟಿ ಹಾಗೂ ಅಯೋಧ್ಯಾ ನಗರದಲ್ಲಿ ಡೆವಲಪ್ ಆಗುತ್ತಿವೆ ಅದರ ವಿತರಣೆ ಯನ್ನು ಬೇಗ ಮಾಡುತ್ತೇವೆ, ಹೆಚ್ಚಿನ ಸಮಸ್ಯೆಗಳನ್ನು ಬಗೆಹರಿಸಿ ಡೆವಲಪ್‌ಮೆಂಟ್ ಅಥಾರಿಟಿ ಆದಷ್ಟು ಹೆಚ್ಚಿನ ಪ್ರಮಾಣದಲ್ಲಿ ಭೂಮಿಯನ್ನು ತೆಗೆದುಕೊಂಡು ವಿತರಣೆ ಮಾಡುತ್ತದೆ. ಹುಬ್ಬಳ್ಳಿ, ಧಾರವಾಡ ಮತ್ತು ಬೆಂಗಳೂರಿನಲ್ಲಿ ಸರ್ವೀಸ್ ಕೆಲ್ಪರ್ ಪ್ರಾಜೆಕ್ಟ್‌ಗಳನ್ನು ನಾವು ಸೇರಿಸಿದ್ದೇವೆ. ಲ್ಯಾಂಡ್ ಅನ್ನು ಅಕ್ವೈರ್ ಮಾಡಿಕೊಂಡು ಹಂಚಿಕೆ ಮಾಡುವ ಕಾರ್ಯಕ್ರಮವನ್ನು ಸರ್ಕಾರ ಹಾಕಿ ಕೊಳ್ಳುತ್ತದೆ.

ಶ್ರೀ ಎ. ಎಂ. ಹಿಂಡಸಗೇರಿ.— ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿ ಕಾನ್‌ಸ್ಟಿಟ್ಯೂಟ್ ಆಗಿ ೧೦ ತಿಂಗಳು ಆಗಿದೆ. ಆದರೂ ಸಹ ಅಲ್ಲಿನ ಆಕ್ಟ್ ಪ್ರಕಾರ ಕಮಿಟಿ ಮಾಡಬೇಕು. ಸೆಕ್ಷನ್ ೩೭ ಪ್ರಕಾರ ಯಾವ ಕಮಿಟಿಯನ್ನೂ ಮಾಡಲಿಲ್ಲ. ಅಲ್ಲಿ ಅವ್ಯವಹಾರ ನಡೆಯುತ್ತಿದೆ. ತಕ್ಷಣ ಕಮಿಟಿಯನ್ನು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.— ಮಾನ್ಯ ಅಧ್ಯಕ್ಷರೇ, ಅಫಿಷಿಯಲ್ ಮೆಂಬರ್ಸ್ ಕಮಿಟಿ ಆಗಿದೆ. ಅದು ಫಂಕ್ಷನ್ ಆಗುತ್ತಿದೆ. ಅವರು ಹೇಳಿದ್ದು ನಾನ್ ಅಫಿಷಿಯಲ್ಸ್ ಕಮಿಟಿ ಬಗ್ಗೆ, ಅದನ್ನು ಮಾಡಿಲ್ಲ. ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.